ಬಂದುಬಿಟ್ಟಿದೆ ಎಂದು ಕಾಣುತ್ತದೆ. ಪರರ ನೋವಿಗೆ ಮಿಡಿಯುತ್ತಾನೆ. ಮನುಷ್ಯರೇ ಏನು, ಪಶುಪಕ್ಷಿಗಳಿಗೆ ನೋವಾದರೂ ಕೂಡ ಮರುಗುತ್ತಾನೆ. ಸಭೆ ಸಮಾರಂಭಗಳಲ್ಲಿ ಊರ ಜನರೆಲ್ಲ ಅತೀವವಾಗಿ ಅಪೇಕ್ಷೆಪಡುವ, ತಮ್ಮ ಹಕ್ಕೆನ್ನುವಂತೆ ಬೇಡಿಕೆಯಿಡುವ ಮಾಂಸಾಹಾರದ ಭೋಜನವನ್ನು ಸಹ ಈತನಿಗೆ ತಿಳಿಯದಂತೆ ಮಾಡಿಸಬೇಕು. ತಾನೇನಾದರೂ ಪ್ರಾಂತ್ಯಾಧಿಕಾರಿಯಾದರೆ ಪ್ರಾಣಿವಧೆಯನ್ನು ಸಂಪೂರ್ಣ ನಿಷೇಧಿಸುವುದಾಗಿಯೂ, ಅದನ್ನು ರಾಜದ್ರೋಹವೆಂದೂ, ಶಿಕ್ಷಾರ್ಹ ಅಪರಾಧವೆಂದೂ ಪರಿಗಣಿಸಿ ಶಾಸನ ಹೊರಡಿಸುವುದಾಗಿಯೂ ಪದೇ ಪದೇ ಪುನರುಚ್ಚರಿಸುತ್ತಲೇ ಇರುತ್ತಾನೆ. ಈ ಇಂಥ ವೈರಾಗ್ಯ ಭಾವನೆಗಳನ್ನು ನೋಡಿಯೇ, ಬೇಗ ಸಂಸಾರ ಸುಖದಲ್ಲಿ ಮುಳುಗಿಸಿಬಿಡಬೇಕೆಂಬ ಅಭಿಲಾಷೆಯಿಂದ ಕನ್ಯೆಯರನ್ನು ಸಂಶೋಧಿಸಬೇಕಾಗಿ ಬಂದುದು. ನಮ್ಮ ಮನಸ್ಸನ್ನು ಅರಿತವಳಂತೆ ಗೌತಮಿಯೂ ಹೆಣ್ಣುಗಳ ಮೇಲೆ ಕಣ್ಣು ಹಾಯಿಸಲಾರಂಭಿಸಿದ್ದಳು. ನಾನೂ ಕಂಡ ಕಂಡ ಹೆಣ್ಣು ಮಕ್ಕಳಲ್ಲಿ ನನ್ನ ಸೊಸೆಯೊಬ್ಬಳನ್ನು ಅರಸುತ್ತಿದ್ದೆ. ಆದರೆ ಇದನ್ನೇ ಅನೇಕ ಜನ ತಪ್ಪು ತಿಳಿದುಕೊಂಡು ನಾನೇ ಅತೃಪ್ತನಂತೆ, ಹೆಣ್ಣುಮಕ್ಕಳನ್ನು ಎವೆಯಿಕ್ಕದೆ ನೋಡುತ್ತಿರುವೆನೆನ್ನುವಂತೆ ಭಾವಿಸಿರಬೇಕು. ಹೆಣ್ಣುಗಳ ಆಯ್ಕೆ ತುಂಬ ಮಾರ್ಮಿಕವಾದದ್ದು. ಪಾಪ, ಸಿದ್ಧಾರ್ಥನಿಗಾದರೂ ಈ ಹೆಣ್ಣುಗಳ ಅಂತರ್ಯದ ಮರ್ಮ ಹೇಗೆ ಅರಿವಾಗಬೇಕು. ಈ ವಿಷಯದಲ್ಲಿ ಅನುಭವಸ್ಥನಾದ ನಾನಲ್ಲದೇ ಅವನಿಗೆ ಮಾರ್ಗದರ್ಶಕರಾದರೂ ಯಾರಿದ್ದಾರೆ?

ಗೌತಮಿಯೊಡನೆ ಕುಳಿತು ಈ ಬಗ್ಗೆ ಚರ್ಚಿಸಿದೆ. ಆಕೆಯೂ, ಅನೇಕ ದಿನಗಳಿಂದ ಕಣ್ಣು ಹಾಯಿಸುತ್ತಿದ್ದರೂ, ತನ್ನ ಗಮನಕ್ಕೂ ಸೂಕ್ತ ಕನ್ಯೆ ಕಂಡುಬಂದಿಲ್ಲವೆಂದೇ ಹೇಳಿದಳು. 'ಹಾಗಿದ್ದರೆ ಒಂದು ಕೆಲಸ ಮಾಡೋಣ, ಸ್ವಯಂವರದ ಮಾದರಿಯಲ್ಲೇ ಸ್ವಯಂವಧು ಕಾರ್ಯಕ್ರಮವನ್ನು ಏರ್ಪಡಿಸಿ ಬಿಡೋಣ. ಸುತ್ತಮುತ್ತಲಿನ ಯೋಗ್ಯ ರಾಜರು, ರಾಜ ಪ್ರಮುಖರಿಗೆ ತಮ್ಮ ತಮ್ಮ ಹೆಣ್ಣು ಮಕ್ಕಳೊಂದಿಗೆ ಹಾಜರಾಗುವಂತೆ ಕರೆ ಕಳಿಸೋಣ' ಎಂದೆ. ಗೌತಮಿ ನಕ್ಕುಬಿಟ್ಟಳು. ಈ ಹೊಸ ವಿಧಾನಕ್ಕೆ ಎಲ್ಲರೂ ತನ್ನಂತೆಯೇ ನಕ್ಕುಬಿಡುತ್ತಾರೆ ಎಂದು ಬೇರೆ ಸೇರಿಸಿದಳು. ಅದಕ್ಕಿಂತ ಮೊದಲು ಸಿದ್ಧಾರ್ಥನಿಗೆ ಹೆಣ್ಣಿನ ಬಗೆಗಿರುವ ಮನೋಭಿಲಾಷೆಯನ್ನು ತಿಳಿದುಕೊಳ್ಳಬೇಕಲ್ಲವೇ ಎಂಬ ಮೂಲಭೂತ ಪ್ರಶ್ನೆಯೊಂದನ್ನು ಆಕೆ ನನ್ನ ಮುಂದಿಟ್ಟಾಗ ನಾನು ಹೌಹಾರಿದೆ. ಮತ್ತೆ ಮತ್ತೆ ಅಸಿತರ ಭವಿಷ್ಯವಾಣಿಯೇ ನನ್ನ ಕಣ್ಣ ಮುಂದೆ ತೇಲಿಬರುತ್ತಿತ್ತು.

ಆ ಮಹರ್ಷಿಯ ಮಾತು ನಿಜವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಸಿದ್ಧಾರ್ಥನನ್ನು ಸದಾ ಸುಖಭೋಗಗಳಲ್ಲಿ ತೇಲಾಡುವಂತೆ ಮಾಡಿ ಐಹಿಕ ಸುಖದ ಲೋಲುಪ್ತತೆಗೆ ಈಡು ಮಾಡಬೇಕೆಂದು ಆಲೋಚಿಸಿದೆ. ಒಮ್ಮೆ ಈ ಸುಖವನ್ನು ಅನುಭವಿಸಿದರೆ ಮತ್ತೆಂದೂ ಆತ ಸನ್ಯಾಸತ್ವದ ಕಡೆ ಯೋಚಿಸಲಾರ ಎಂಬುದು ನನ್ನ ಅನಿಸಿಕೆಯಾಗಿತ್ತು. ಅದಕ್ಕೆಂದೇ ಆಯಾ ಋತುಮಾನಗಳಿಗೆ ತಕ್ಕಂತೆ ಮೂರು ಪ್ರತ್ಯೇಕ ಸ್ಥಳಗಳನ್ನು ಗುರುತಿಸಿ ವಿಹಾರ ಕೇಂದ್ರಗಳನ್ನು ಕಟ್ಟಿಸಿದೆ. ಬೇಸಿಗೆಗೆಂದು ಉನ್ನತ ಪರ್ವತದ ತುತ್ತತುದಿಯಲ್ಲಿಯೂ, ಮಳೆಗಾಲಕ್ಕೆಂದು ದಟ್ಟಕಾಡಿನ ಮಧ್ಯೆಯೂ, ಚಳಿಗಾಲಕ್ಕೆಂದು ಬಯಲು ಪ್ರದೇಶದಲ್ಲಿಯೂ ಸಾಕಷ್ಟು ವಿಶಾಲವಾದ ಮನೆಗಳನ್ನು ನಿರ್ಮಿಸಿದೆ. ಅವುಗಳ ಸುತ್ತಲೂ ನಳನಳಿಸುವ ಹೂವುಗಳ ಗಿಡಗಳನ್ನು ನೆಡಿಸಿ, ಸುಂದರ ಉದ್ಯಾನವನಗಳನ್ನು ಮಾಡಿಸಿದೆ. ಆಯಾ ಕಾಲಕ್ಕೆ ಅಗತ್ಯವಾದ ಸಕಲ ಲೋಲುಪ್ತ ಪೇಯಗಳನ್ನು ಅಲ್ಲಲ್ಲಿ ಇರಿಸಿದೆ. ಅಷ್ಟಕ್ಕೇ ಬಗೆಹರಿಯಿತೇ?

ಯಾವುದೇ ಸುಖ ನಿರ್ಜೀವ ವಸ್ತುಗಳಿಂದ ಸಿಗಲು ಸಾಧ್ಯವೇ? ಎಂದೇ ಅಲ್ಲೆಲ್ಲಾ ಆಯಾ ಕಾಲಕ್ಕನುಗುಣವಾದ ಸೇವೆ ಮಾಡಲು ಸುಂದರಿಯರನ್ನು ನೇಮಿಸಿದೆ. 'ಬರೀ ಸುಂದರಿಯರಿದ್ದರೆ ಸಾಕೇ? ಅವರು ಭಯಭಕ್ತಿಯಿಂದ ನಡೆದುಕೊಂಡರೆ ಆತನಿಗೆ ವಿಷಯಾಸಕ್ತಿ ಮೂಡುವುದಾದರೂ ಹೇಗೆ?' ಎಂದಳು ಪ್ರಜಾಪತಿ ಗೌತಮಿ. ಆಕೆಯ ಮಾತೂ ನಿಜ. ಕುಲಪುರೋಹಿತ ಉದಯನನನ್ನು ಕರೆಸಿದೆ. ಆ ಯುವತಿಯರು ಬರೀ ಸುಂದರಿಯರಾಗಿದ್ದರೆ ಸಾಲದು, ರಾಜಕುಮಾರನಲ್ಲಿ ಪ್ರಾಪಂಚಿಕ ವಿಷಯಾಸಕ್ತಿ ಪ್ರಚೋದಿಸಲು ತಕ್ಕನಾದ ತರಬೇತಿಯನ್ನೂ ಅವರಿಗೆ ನೀಡಬೇಕು ಎಂದು ಮನವರಿಕೆ ಮಾಡಿಕೊಟ್ಟೆ. ಅದರಂತೆ ಆತ ಮಾದಕ ಯುವತಿಯರನ್ನು ಆಯ್ಕೆ ಮಾಡಿದ. ಅವರಿಗೆ ರಾಜನನ್ನು ಹೇಗೆ ಪ್ರಲೋಭಿಸಬೇಕು ಎಂಬ ತರಬೇತಿ ನೀಡಿರುವುದಾಗಿ ವರದಿ ನೀಡಿದ. ನನಗೆ ಸಮಾಧಾನವಾಗಲಿಲ್ಲ. ನಾನೇ ಅವರನ್ನೆಲ್ಲ ಸಂದರ್ಶಿಸುವುದಾಗಿ ತಿಳಿಸಿದೆ. ಆಯಾ ಋತುಮಾನದ ಕಟ್ಟಡಗಳಿಗೆ ಅನುಗುಣವಾಗಿ ಅಲ್ಲಲ್ಲಿಯ ಯುವತಿಯರನ್ನೇ ನೇಮಿಸಿದ್ದ ಉದಯನ. ಆದರೆ ಸ್ಥಳೀಯ ಯುವತಿಯರು ತಮ್ಮನ್ನು ತಾವು ತೆರೆದುಕೊಳ್ಳಬೇಕೆಂದರೆ ಮನೆಯ ನೆರಳೂ ಸೋಕಬಾರದೆಂಬ ಕನಿಷ್ಠ ತಿಳಿವಳಿಕೆಯೂ ಆತನಿಗಿರಲಿಲ್ಲ. ಎಂದೇ ಬೇಸಿಗೆ ಶಿಬಿರದವರನ್ನು ಮಲೆನಾಡಿನ ಮನೆಗೂ, ಮಲೆನಾಡ ಮನೆಯವರನ್ನು ಚಳಿಗಾಲದ ಬಿಡಾರಕ್ಕೂ, ಚಳಿಗಾಲಕ್ಕೆಂದು ನೇಮಿಸಿದ್ದವರನ್ನು ಬೇಸಿಗೆ ಶಿಬಿರಕ್ಕೂ ವರ್ಗಾಯಿಸಿದೆ. ಒಂದೇ ಪ್ರದೇಶದ ಎಲ್ಲರೂ ಒಟ್ಟಿಗೇ ಇದ್ದರೆ ಅವರವರಲ್ಲೇ ಈರ್ಷ್ಯೆ ಬೆಳೆಯಬಹುದೆಂದು ಮತ್ತೆ ಕೆಲವರನ್ನು ಆಂತರಿಕವಾಗಿ ಬದಲಿಸಿದೆ. ಈಗ ತಾರತಮ್ಯವಿಲ್ಲದ ಒಂದು ಹಂತಕ್ಕೆ ಬಂತೆಂದಾಗ ಅಲ್ಲಲ್ಲಿಗೆ ಒಂದೊಂದು ದಿನದ ಭೇಟಿ ನೀಡಿ ಅವರನ್ನೆಲ್ಲ ಒಬ್ಬೊಬ್ಬರನ್ನಾಗಿ ಸಂದರ್ಶಿಸಿದೆ.

'ವಶೀಕರಣ ವಿದ್ಯೆಯಲ್ಲಿ ಹೆಣ್ಣನ್ನು ಮೀರಿಸುವ ಇನ್ನೊಂದು ಜೀವ ಈ ಭೂಮಿಯ ಮೇಲಿಲ್ಲ. ಸೌಂದರ್ಯವತಿಯರಾದ ನಿಮಗೆ ಪುರುಷನನ್ನು ಆಕರ್ಷಿಸುವ ಕಲೆ ದೈವದತ್ತವಾಗಿ ಒದಗಿಬಂದಿರುತ್ತದೆ. ನಿಮ್ಮ ಮಾದಕ ನೋಟದಿಂದಲೇ ವಿರಾಗಿಗಳಾಗಿರುವ ಋಷಿಗಳನ್ನೂ ಒಲಿಸಿಕೊಳ್ಳಬಲ್ಲಿರಿ ಎಂಬುದು ಈಗಾಗಲೇ ಪ್ರಚಲಿತವಾಗಿದೆ. ನಿಮ್ಮ ದೇಹಸಿರಿ, ಸೌಂದರ್ಯ, ಬೆಡಗು, ಬಿನ್ನಾಣಗಳಿಂದ ರಾಜಕುಮಾರನನ್ನು ಮರುಳಾಗಿಸಬೇಕು. ನಿಮ್ಮ ಕೌಶಲ್ಯದಿಂದ ಯುವರಾಜನ ಮನಸ್ಸನ್ನು ಗೆದ್ದು ಅವನನ್ನು ಪ್ರೇಮಪಾಶದಲ್ಲಿ ಬಂಧಿಸಬೇಕು. ಸಿದ್ಧಾರ್ಥನ ಅಂತಸ್ತು ದೊಡ್ಡದಿದೆಯೆಂದು ನೀವು ಕೀಳರಿಮೆ ಇಟ್ಟುಕೊಳ್ಳದೆ ನಿಮ್ಮ ಚುಂಬಕ ಶಕ್ತಿಯಿಂದ

## ಕಳೆದ ಸಂಚಿಕೆಯಲ್ಲಿ



ಮಾಯಾದೇವಿಯ ಮಗುವೇನೋ ಬೆಳದಿಂಗಳ ಚಂದ್ರನಂತೆ ಬೆಳೆಯತೊಡಗಿತು. ಆದರೆ, ತಾಯಿಯ ಅದೃಷ್ಟ ದೊಡ್ಡದಿರಲಿಲ್ಲ. ಗಂಡನ ಕಾಳಜಿ ಹಾಗೂ ತಂಗಿಯ ಆರೈಕೆಯ ನಡುವೆಯೂ ಮಾಯಾದೇವಿ ಕಣ್ಮುಚ್ಚಿದಳು. ಸಿದ್ಧಾರ್ಥನಿಗೆ ತಾಯಿಯ ಕೊರತೆ ಕಾಡದಂತೆ ಗೌತಮಿಯೇ ಕಾಳಜಿ ಮಾಡತೊಡಗಿದಳು. ಆದರೆ, ಮೊಮ್ಮಗುವಿನ ಭವಿಷ್ಯದ ಕಳವಳ ಅಂಜನಕೋಲಿ–ಸುಲಕ್ಷಣೆ ದಂಪತಿಯನ್ನು ಕಾಡತೊಡಗಿತು. ಅವರ ಒತ್ತಾಯದ ಮೇರೆಗೆ ಶುದ್ಧೋದನ ಮತ್ತು ಗೌತಮಿಯರ ವಿವಾಹ ನಡೆಯಿತು. ಸಿದ್ಧಾರ್ಥ ಎಲ್ಲರ ಕಣ್ಮಣಿಯಾಗಿದ್ದ. ಗುರುಕುಲಕ್ಕೆ ಹೋಗಿ ಸಕಲ ವಿದ್ಯೆಗಳಲ್ಲಿ ಪರಿಣತಿಯನ್ನೂ ಪಡೆದ. ತಾಯಿಯ ಕಾರುಣ್ಯ ಮಗನಲ್ಲೂ ಬಂದಿತ್ತು. ಶುದ್ಧೋದನನ ತಂಗಿಯ ಮಗ ದೇವದತ್ತನ ಬಾಣಕ್ಕೆ ಸಿಲುಕಿದ ಪಕ್ಷಿಯನ್ನು ಸಿದ್ಧಾರ್ಥ ರಕ್ಷಿಸಿದ. 'ಜೀವ ಕೊಡಲು ಶಕ್ತಿಯಿಲ್ಲದ ನಮಗೆ ಕೊಲ್ಲುವ ಹಕ್ಕೂ ಇಲ್ಲ. ಸಾವಿನಿಂದ ರಕ್ಷಿಸಿದ ನನಗೆ ಪಕ್ಷಿಯ ಒಡೆತನ ನನಗೇ ಸಲ್ಲಬೇಕು' ಎಂದು ಸಿದ್ಧಾರ್ಥ ವಾದಿಸಿದ. ಅವನ ವಾದಕ್ಕೆ ಮನ್ನಣೆ ದೊರೆತರೂ, ಅವಮಾನಗೊಂಡ ದೇವದತ್ತ ವೈರತ್ವ ಸಾಧಿಸತೊಡಗಿದ.